ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

OS ನಂಬರ. 46/2017

ಪಿ ಡಬ್ಲ್ಯೂ- 3

ದಿಃ 24-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಆನಂದು ಗೌಡ
ತಂದೆಯ ಹೆಸರುಃ ಸೋಮು
ವಯಸ್ಸುಃ 47 ವರ್ಷ
ಉದ್ಯೋಗಃ ಖಾಸಗಿ ಶಿಕ್ಷಕರು/ರೈತಾಬಿ
ವಿಳಾಸಃ ಬೆಳಂಬರ, ಅಂಕೋಲಾ .

ಮುಖ್ಯ ವಿಚಾರಣೆ: ವಾದಿಯರ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

ನನಗೆ ವಾದಿಯರ ಪರಿಚಯವಿರುತ್ತದೆ. 1ನೇ ಪ್ರತಿವಾದಿಯ ಪರಿಚಯ ನನಗೆ ಇರುವುದಿಲ್ಲ. ನಿಮ್ಮ ಹಾಗೂ ವಾದಿಯರ ಮನೆಯು ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು ಸುಮಾರು 3 ಕಿ.ಮೀ ಆಗುತ್ತದೆ ಎಂದು ನುಡಿಯುತ್ತಾರೆ. ನಿಮಗೆ ವಾದಿಯರ ಪರಿಚಯ ಹೇಗೆ ಆಯಿತು ಎಂದರೆ ಸಾಕ್ಷಿಯು ನಮ್ಮ ತಂದೆಯವರ ಕಾಲದಿಂದ ಪರಿಚಯವಾಗಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆ ತಾಯಿಯರು ವಾದಿಯರ ಜಮೀನಿಗೆ ಗದ್ದೆ ಕೆಲಸಕ್ಕೆ ಎಂದು ಹೋಗುತ್ತಿದ್ದರು, ಆಗ ನಾನೂ ಸಹ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ಈಗ ನಾನು ಗದ್ದೆ ಕೆಲಸಕ್ಕೆ ಹೋಗುವುದಿಲ್ಲ ನಮ್ಮ ತಾಯಿಯವರು ವಯಸ್ಸಾಗಿದ್ದರಿಂದ ಅಪರೂಪಕ್ಕೆ ಹೋಗುತ್ತಾರೆ ಎಂದು ನುಡಿಯುತ್ತಾರೆ.

ತಕರಾರಿ ಜಮೀನನ್ನು ವಾದಿಯರು ಸಾಗುವಳಿ ಮಾಡುತ್ತಾರೆ. ಈ ವರ್ಷವೂ ಸಹ ವಾದಿಯರು ಸಾಗುವಳಿ ಮಾಡಿದ್ದಾರೆ.

ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಮುದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.